ಪ್ರದೇಶಗಳಲ್ಲಿ, ಕುಡಿಯುವ ನೀರಿನ ಸರಬರಾಜಿಗೂ ಹಣ ಬಿಡುಗಡೆ ಮಾಡಲಾಗಿದೆ. ಇವೆಲ್ಲವುಗಳಿಗೆ ಪ್ರಸ್ತುತ ವರ್ಷ ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತಿದೆ.

ಕುಡಿಯುವ ನೀರಿನ ಸರಬರಾಜಿಗಾಗಿ		(ಲಕ್ಷ ರೂ.) ರೈತರಿಗೆ ಕೃಷಿ ಸಾಮಗ್ರಿಗಳನ್ನೊಳಗೊಂಡ ಚೀಲಗಳ ಸರಬರಾಜಿಗಾಗಿ
ಗ್ರಾಮಾಂತರ	ಪಟ್ಟಣ	
೧೩.೦೦	೧೫.೦೦	೮.೦೦

ಅ) ಯಾವ ಒಂದು ಪ್ರದೇಶವನ್ನು ಸರ್ಕಾರವು ಬರಪೀಡಿತ ಎಂದು ಘೋಷಿಸುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಪರಿಹಾರ ಒದಗಿಸಿರುವ ಬಗ್ಗೆ ಮೇಲಿನ 'ಅ'ದಲ್ಲಿ ಈಗಾಗಲೇ ವಿವರಣೆ ನೀಡಲಾಗಿದೆ.

ಪುನರ್ ವಸತಿ

೧೯೭. ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾರವಾರದ "ಸಿಬರ್ಡ್" ನೌಕಾನೆಲೆಯಿಂದಾಗಿ ನಿರಾಶ್ರಿತರಾದವರ ಪುನರ್ ವಸತಿ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು ನೀಡಿರುವ ಅನುದಾನದ ಮೊತ್ತವೆಷ್ಟು ?

ಆ) ಈ ನೌಕಾನೆಲೆಗಾಗಿ ಬೇಕಾಗಿರುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ನಿರಾಶ್ರಿತರ ಪುನರ್ ವಸತಿಗಾಗಿ ರಾಜ್ಯ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು):—

ಅ) ಕೇಂದ್ರ ಸರ್ಕಾರವು ಸ್ಥಳಾಂತರಗೊಳ್ಳುವ ಜನರ ಪುನರ್ವಸತಿಯನ್ನು ಕಲ್ಪಿಸುವ ಸಲುವಾಗಿ ಅಂದಾಜು ವೆಚ್ಚವಾದ ರೂ. ೭.೦೪ ಕೋಟಿ ಹಣವನ್ನು ಬಿಡುಗಡೆ ಮಾಡಿದ್ದಾರೆ.

		ಎ–	ಗು–ಸೆ
ಆ)	೧) ಖಾಸಗಿ ಜಮೀನು	೨೪೬೩–	೩೪–೦೫
	೨) ಅರಣ್ಯ ಜಮೀನು	೫೫೭೫–	೦–೦
	೩) ಸರಕಾರಿ ಪಡ ಜಮೀನು	೪೪–	೨೬–೪೫
	೪) ಬಂದರ ಇಲಾಖೆಯ ಜಮೀನು	೫೦–	೩೩–೨೫

ಇ) ಮಾನ್ಯ ಕೃಷಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಪುನರ್‌ವಸತಿ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸ್ಸುಗಳು ಸರಕಾರದ ಪರಿಶೀಲನೆಯಲ್ಲಿದೆ.

ಸಮಾಜ ಕಲ್ಯಾಣ ಇಲಾಖೆಯಲ್ಲಿನ ಯೋಜನೆಗಳ ಬಗ್ಗೆ.

೨೩೫. ಶ್ರೀ ಗೋಪಾಲ ಮುಕುಂದ ಕಾನಡೆ (ಕಿರ್ಸಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ ಹಮ್ಮಿಕೊಂಡ ಯೋಜನೆಗಳಾವುವು.

ಆ) ಸದರಿ ಯೋಜನೆಗಳಿಗಾಗಿ ಸರ್ಕಾರದವರು ಒದಗಿಸಿರುವ ಹಣ ವೆಷ್ಟು (ಯೋಜನಾವಾರು ವಿವರ ಒದಗಿಸುವುದು)